

International Journal of Kannada Research
www.kannadajournal.com

**ISSN: 2454–5813**
IJKR 2019; 5(4): 93-95
© 2019 IJKR
www.kannadajournal.com
Received: 22-08-2019
Accepted: 24-09-2019

**ಡಾ.ರೂತಾ ಪ್ರಭುರಾವ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಹುಮನಾಬಾದ ಜಿ॥ ಬೀದರ

**Corresponding Author:**
**ಡಾ.ರೂತಾ ಪ್ರಭುರಾವ ತಾಳಮಡಗಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಹುಮನಾಬಾದ ಜಿ॥ ಬೀದರ

# ಸೃಜನಶೀಲತೆ

**ಡಾ.ರೂತಾ ಪ್ರಭುರಾವ**

ಸೃಜನಶೀಲತೆ ಎಂದು ಕರೆಯುವುದು ಸುಲಭ, ವಿವರಿಸುವುದು ಕಷ್ಟ. ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕಾವ್ಯ, ಕತೆ, ಕಾದಂಬರಿ, ನಾಟಕಗಳಿಗೆ ಸೃಜನಶೀಲವೆಂದು, ಸಂಶೋಧನೆ, ವಿಮರ್ಶೆ, ವಿಶ್ಲೇಷಣೆಯನ್ನು ಸೃಜನೇತರವೆಂದು ವಿಭಾಗಿಸಿಕೊಂಡಿದ್ದೇವೆ. ಈ ಸೃಜನಶೀಲತೆ ಎನ್ನುವುದು ನವೋದಯ ಕಾಲದ ವಿಮರ್ಶಕರು ಹುಟ್ಟು ಹಾಕಿದರೆಂದು ಕಾಣುತ್ತದೆ.

ಸೃಜನಶೀಲತೆಯ ಅರ್ಥದ ಕಡೆಗೆ ಗಮನ ಹರಿಸುವದಾದರೆ ಅದು ಸೃಜಿಸಬಲ್ಲ, ಹುಟ್ಟಿಸಬಲ್ಲ, ರಚನಾತ್ಮಕ ದೃಷ್ಟಿಗೆ ಸಂಬಂಧಿಸಿದ್ದು, ಆದರೆ ವಿಮರ್ಶೆ ಮತ್ತು ಸಂಶೋಧನೆಗೆ ಸೃಜನೆಯಷ್ಟು ಮಹತ್ವವಿಲ್ಲ. ಏಕೆಂದರೆ ಸೃಜನೆಯಾದ ನಂತರವೆ ವಿಮರ್ಶೆ ಸಂಶೋಧನೆಯ ಕಾರ್ಯ ನಡೆಯುತ್ತದೆಂಬ ಕಾರಣವಿರಬಹುದು ಕವಿ ಕಾಣದ್ದು ವಿಮರ್ಶಕ ಕಂಡ ಅನ್ನುವಲ್ಲಿ ಸೃಜನಶೀಲತೆ ಇದೆ. ಎನಿಸುತ್ತದೆ. ಸಂಶೋಧನೆವರೆಗೆ ಹಚ್ಚುವುದರಿಂದ ಅದು ಸೃಜನವೆ.

ನಾವು ಸೃಜನಶೀಲ ಪ್ರಕಾರವೆಂದು ಯಾವುದನ್ನು ಕರೆಯುತ್ತೇವೋ ಅದರ ಜೊತೆಯಲ್ಲಿಯೇ ಮೌಲ್ಯಾತ್ಮಕ ಮಾತುಗಳು ಸಂಯೋಜಿಸಲಾಗುತ್ತದೆ. ಕಾವ್ಯ, ಕಥೆ, ಕಾದಂಬರಿ ನಾಟಕ ಇತ್ಯಾದಿ ಮೂಲ ವ್ಯಕ್ತಿತ್ವವನ್ನು ಹುಡುಕುವುದು ಕಷ್ಟವೆ. ಕೃತವಾದುದು ಕೃತಿ. ಸೃಷ್ಟಿಯಾದುದು ಸೃಜನ, ಕವಿಯಿಂದ ರಚಿತವಾದುದು ಕಾವ್ಯ. ಹೀಗೆ ಪ್ರತಿಯೊಂದು ಪದವು ಅದರ ಮೂಲವಾದ ಅರ್ಥವನ್ನು ಮತ್ತು ಚಹರೆಯನ್ನು ಪ್ರತ್ಯೇಕವಾಗಿ ಪಡೆದುಕೊಂಡಿದೆ. ಉದಾಃಪ್ರತಿಭೆ ಮತ್ತು ಸೃಜನಶೀಲತೆ ಎರಡು ಒಂದೇ ಅಲ್ಲ ಆದರೆ ಕವಿಯನ್ನು ಪ್ರತಿಭಾನ್ವಿತನೆಂದು ಸುಲಭವಾಗಿ ಗುರುತಿಸುತ್ತೇವೆ. ಸೃಜನಶೀಲವಾದ ಪ್ರತಿಭೆ, ಸೃಜನಶೀಲವಾದ ಮನಸ್ಸು, ಸೃಜನಶೀಲವಾದ ಚಟುವಟಿಕೆ ಮುಂತಾದ ಪದಗಳನ್ನು ಬಳಸುವಾಗ ಆಯಾ ಪದಗಳು ಚಾಲ್ತಿಗೆ ಬಂದ ಸನ್ನಿವೇಶಗಳನ್ನು ಮರೆಯುತ್ತೇವೆ. ಸೃಜನಶೀಲ ಮನಸ್ಸು, ಸೃಜನಶೀಲ ಚಟುವಟಿಕೆಗಳಿಗಿಂತ ಸೃಜನಶೀಲ ಪ್ರತಿಭೆ ಮೊದಲು ಗುರುತಿಸಿಕೊಳ್ಳುತ್ತದೆ.

ಸೃಜನಶೀಲತೆ ಅನುಭವಗಳನ್ನು ಒಂದು ಕ್ರಮದಲ್ಲಿ ಪುನಾರೂಪಿಸುವ ಕಲ್ಪನಾ ಶಕ್ತಿಗೆ ಸಂಬಂಧಿಸಿದ್ದು, ಯಾವುದು ಪ್ರತಿಭೆ ಎಂಬ ಹೆಸರಿನಲ್ಲಿ ಕಾವ್ಯ ಮೀಮಾಂಸಕರು ಪ್ರಜ್ಞಾ ನವ ನಮೋನ್ಮೇಷ ಶಾಲಿನಿ ಪ್ರತಿಭಾ ಎಂದು ಕರೆದರೋ ಅದೆ ಇದು ಸೃಜನಶೀಲತೆಯು ಸಂಬಂಧಪಡದ ಸಂಗತಿಗಳನ್ನು ಜೋಡಿಸಿ ಮತ್ತೊಂದನ್ನು ನಿರ್ಮಿಸಬಲ್ಲದು. ಹೋಳಹೂಗಳನ್ನು, ಕಲ್ಪನೆಗಳನ್ನು ಹೊಸದಾಗಿ ಹೊಳೆಯಿಸಿಕೊಳ್ಳುವುದು ಮಾತ್ರವಲ್ಲ. ತನ್ನದೆಯಾದ ಕಾಣ್ಕೆಯಲ್ಲಿ ಹೊಸದಾಗಿ ನಿರ್ಮಿಸುತ್ತದೆ. ಅನುಭಾವವನ್ನು ತನ್ನ ಭಾವದ ತೆಕ್ಕೆಗೆ ತೆಗೆದುಕೊಂಡು ಹೊರಹಾಕುವಂತಹ ಕ್ರಿಯೆಯಾಗಿರುತ್ತದೆ. ಅನುಭಾವವೆನ್ನುವುದು ಭಾವದ ತೀವ್ರತೆಯನ್ನು ಹೆಚ್ಚಿಸುತ್ತದೆ. ಅಮೂರ್ತವಾದದ್ದನ್ನು ಮೂರ್ತರೂಪವಾಗಿ ಹೊರಗೆ ಬರುವವರೆಗೂ ಸದಾ ಕಾಡುತ್ತಿರುತ್ತದೆ. ಅದು ಹೊರಹಾಕಿದಾಗಲೆ ಕವಿಗೆ ನೆಮ್ಮದಿ ಮತ್ತು ಶಾಂತಿ.

ಸೃಜನಶೀಲತೆಯಿದ್ದು, ಅದು ಮತ್ತೊಬ್ಬರು ಅನುಭವಿಸುವ ರೂಪದಲ್ಲಿ ಮೂಡಲಿಲ್ಲವೆಂದರೆ ಅದನ್ನು ಸೃಜನಶೀಲತೆಯೆಂದು ಗುರುತಿಸುವುದಾದರು ಹೇಗೆ? ಸೃಜನಶೀಲತೆಯು ಮನುಷ್ಯನ ಕ್ರೀಯಾಶೀಲತೆಗೆ ಸಂಬಂಧಿಸಿದ್ದು, ಆದಿ ಮಾನವನು ಕಾಳ್ಗಿಚ್ಚನ್ನು ಕಂಡು ಚಕಮಕಿ ಕಲ್ಲುಜ್ಜಿ ಬೆಂಕಿಯನ್ನು ಕಂಡು ಹಿಡಿದ ಮಾನವ ನಿಜಕ್ಕೂ ಸೃಜನಶೀಲ. ಕೃಷಿ ಕೆಲಸಗಳಿಗೆ ಉಪಕರಣಗಳನ್ನು ತಯಾರಿಸಿಕೊಟ್ಟ ಆಯಗಾರರು ಕೂಡ ಸೃಜನಶೀಲರೆ, ಮೇಲಾಗಿ ಹಲಗೆ ಬಾರಿಸುವ ದಲಿತ ಮದುವೆ ಸಮಾರಂಭದಲ್ಲಿ ಸತ್ತಾಗ, ಮಹೋರಂ ಆಚರಣೆಗಳಲ್ಲಿ ಒಂದೊಂದು ರೀತಿಯ ಕೈಪೆಟ್ಟಿನ ಬಾರಿಸುವಿಕೆ ಆತನೆ ಕಂಡುಕೊಂಡದ್ದು ಅದು ಕೂಡ ಸೃಜನವೆ. ಇವುಗಳಿಗೆ ಭಾಷಿಕವಾದ ಅಭಿವ್ಯಕ್ತಿ ಮಾಧ್ಯಮವಿಲ್ಲದ ಕಾರಣ ಸೂತ್ರಿಕರಿಸಲು ಸಾಧ್ಯವಾಗಲಿಲ್ಲವೆನ್ನಿಸುತ್ತದೆ. ಸೃಜನಶೀಲತೆಯ ಹರಹನ್ನು ಚಾಚಬಹುದೆಂಬ ಸಾಧ್ಯತೆಯನ್ನು ಗುರುತಿಸಿದೆ.

ಸೃಜನಶೀಲನಾದ ಕೆಲಗಾರನ ಮನಸ್ಸು ತಾನು ಕಂಡ ವಸ್ತುವನ್ನೇ ವರ್ಣಿಸುವುದಿಲ್ಲ. ಅದರ ಒಳಗೂ ಮತ್ತು ಹೊರಗು ಇರಬಹುದಾದದ್ದನ್ನು ಗ್ರಹಿಸುವ ಕಡೆಗೆ ಅವನ ಮನಸ್ಸು ತುಡಿಯುತ್ತಿರುತ್ತದೆ. ಮನುಷ್ಯನ ಮನಸ್ಸಿಗಿರುವ ಈ ಸೃಷ್ಟಿಕರ್ತೃತ್ವಗುಣ ಪ್ರಖರವಾದಷ್ಟು ಅದು ಕಂಡಷ್ಟೆ ವರ್ಣಿಸುವುದು ಅವನಿಗೆ ಅತೃಪ್ತಿಯಾಗಿ ಕಾಣುತ್ತದೆ. ಒಣಗಿ ನಿಂತ ಮರವನ್ನು ನೋಡಿ ಅನುಕರಣಾ ಬುದ್ಧಿ, ಅದನ್ನು ಯಥಾವತ್ತಾಗಿ ಪಟವೊಂದರ ಮೇಲೆ ಚಿತ್ರಿಸುತ್ತದೆ. ಆ ಮರ ಯಾವುದಕ್ಕೆ ಸಂಕೇತವೆಂದು ಅವನ ಒಳಗಣ್ಣಿಗೆ ಹೊಳೆಯಿತೋ ಅದನ್ನು ಚಿತ್ರಿಸಿ ತೋರಿಸುತ್ತಾನೆ. ಒಣಗಿದ ಮರಕ್ಕೆ ಕಲಾವಿದ ಆಗುತಾನೆ ಹೊರಹೊಮ್ಮುವ ಚಿಗುರನ್ನು ಚಿತ್ರಿಸಿ ಬರಡನ್ನು ಚಿಗುರಿಸುತ್ತಾನೆ. ಕಲಾವಿದನ ಕಾಣ್ಕೆಯಿಂದ ಬದುಕಿನಲ್ಲಿ ಆಶಾಭಾವನೆಯನ್ನು ಚಿಗುರಿಸುತ್ತದೆ. ಕಲಾವಿದನ ಕುಂಚದಿಂದ ಮರ ಹೊಸದಾಗಿ ಸೃಷ್ಟಿಯಾಯಿತೋ ಅದೇ ಸೃಜನಶೀಲತೆಯಾಯಿತು.

ನಮ್ಮ ಮನಸ್ಸು ಎರಡು ರೀತಿಗಳಲ್ಲಿ ಕೆಲಸ ಮಾಡುತ್ತದೆ. ಬುದ್ಧಿಪೂರ್ವಕವಾಗಿ ಮತ್ತು ಭಾವಪೂರ್ವಕವಾಗಿ ತನ್ನ ಸುತ್ತಲು ನಡೆಯುವ ಸಂಗತಿಗಳನ್ನು ಕಂಡು ಬುದ್ಧಿ ಪ್ರಶ್ನಿಸುತ್ತದೆ. ವಿಚಾರ ಮಾಡುತ್ತದೆ. ವಿಶ್ಲೇಷಿಸುತ್ತದೆ. ಆಕಾಶದಲ್ಲಿ ತೇಲುವ ಮೋಡಗಳು ಕಂಡು ಬುದ್ಧಿ ಹೇಳುತ್ತದೆ. ಅದು ಬರೀಯ ನೀರಿನ ಆವಿ. ಆದರೆ ಭಾವನೆಯ ಕಣ್ಣಿಗೆ ಅದೊಂದು ಸೋಜಿಗ ಮೋಡಗಳು ಮೋಡಗಳಾಗಿ ಕಾಣದೆ, ಆಕಾಶ ಬಾನಿನಲ್ಲಿ ವಿಹರಿಸುವ ಹಂಸಗಳಂತೆ ನಿಸರ್ಗದ ಬೆಟ್ಟ ಗುಡ್ಡಗಳಾಗಿ ಕಾಣಬಹುದು ಹೀಗೆ ಅಂದಂದಿನ ಮನಸ್ಥಿತಿಗೆ ಒಂದೇ ವಸ್ತು ಬೇರೆ ಬೇರೆ ರೀತಿಯಾಗಿ ಕಾಣಬಹುದು. ಹಾಗೆ ತೋರಿದ್ದು ಸುಳ್ಳಲ್ಲ. ಅದು ಸತ್ಯವೆ ಅದು ಭಾವನಾ ದೃಷ್ಟಿಗೆ ಕಂಡ ಭಾವನಾ ಸತ್ಯ ಅದಕ್ಕಾಗಿಯೇ ಕುವೆಂಪುರವರು ಬುದ್ಧಿಭಾವಗಳ ವಿದ್ಯುದ್ಧಾಲಿಂಗನವೆಂದು ಕರೆದಿದ್ದಾರೆ.

ಸೃಜನಶೀಲತೆಯನ್ನು ಬರಹಕ್ಕೆ ಮಿತಿಗೊಳಿಸಿಕೊಳ್ಳುವುದಾದರೆ ಕಲ್ಪನೆ, ಭಾವನೆ, ಅನುಭವ ಪ್ರಧಾನವಾದ ಬರವಣಿಗೆಗೆ ಸೃಜನಶೀಲವೆಂದು, ಬುದ್ಧಿ, ಚಿಂತನೆ, ತರ್ಕ, ಮಾಹಿತಿ, ವಿಶ್ಲೇಷಣಾ ಪ್ರಧಾನ ಬರವಣಿಗೆಗೆ ಸೃಜನೇತರವೆಂದು ತಿಳಿಯಲಾಗಿದೆ. ಸೃಜನಶೀಲತೆಯೂ ಪ್ರಕಾರಬದ್ಧವಲ್ಲ. ವಿಧಾನ ಬದ್ಧವಲ್ಲ ಮಾಧ್ಯಮ ಬದ್ಧವಲ್ಲ ಅದು ಒಟ್ಟಾರೆ ಪ್ರಕಟವಾಗುವ ಜೀವಂತಿಕೆಗೆ ಸಂಬಂಧಿಸಿದ್ದು.

ಕನ್ನಡ ಸಾಹಿತ್ಯದ ಎರಡು ಕಾಲಘಟ್ಟಗಳಲ್ಲಾದ ಬದಲಾವಣೆಯನ್ನು ಗುರುತಿಸುವುದಾದರೆ, ನವೋದಯದ ಕವಿಗಳಲ್ಲಿ ಮಾನವ ಮನಸ್ಸು ಮತ್ತು ನಿಸರ್ಗ ಮೊದಲ ಬಾರಿಗೆ ಮುಖಾಮುಖಿಯಾದವು.

ಕುವೆಂಪು:ಆನಂದಮಯ ಈ ಜಗ ಹೃದಯ

ಏತಕೆ ಭಯ ಮಾಗೋ
ಸೂರ್ಯೋದಯ ಚಂದ್ರೋದಯ
ದೇವರ ದಯೆ ಕಾಣೋ,
ಕೆ.ಎಸ್.ಎನ್: ದೀಪವು ನಿನ್ನದೆ ಗಾಳಿಯು ನಿನ್ನದೆ
ಆರದಿರಲಿ ಬೆಳಕು
ಕಡಲು ನಿನ್ನದೆ ಹಡಗು ನಿನ್ನದೆ
ಮುಳುಗದಿರಲಿ ಬದುಕು

ಪ್ರಕೃತಿಯನ್ನು ದೈವೀಕರಿಸುವ, ದೈವವನ್ನು ಕಾಣುವ ದೃಷ್ಟಿಕೋನ, ಮುಖ್ಯವಾಗಿದೆ. ದೈವ ಕೃಪೆಯಿಂದಲೆ ಕವಿ ಹಾಡು ರಚನೆ ಮಾಡುತ್ತಾನೆಂದು ನಂಬಲಾಗಿತ್ತು. ಇದಲ್ಲದೆ ಅನುಭಾವಿ ಕವಿಗಳು ಪ್ರತಿಯೊಂದು ಪದ್ಯದಲ್ಲಿ ತಮ್ಮ ಇಷ್ಟ ದೈವದ ಹೆಸರನ್ನು ಹೊಗಳಿ, ಹಾಡಿನ ಕೊನೆಯ ಚರಣಾದಲ್ಲಿ ಅಂಕಿತವನ್ನು ಹಾಕಿದ್ದು ಕಾಣುತ್ತೇವೆ.

ನವೋದಯ ಕಾಲದಲ್ಲಿ ಕವಿತೆಗಳು ದೈವತ್ವವನ್ನು ಹೊಗಳಿ ಅಟ್ಟಕ್ಕೇರಿಸಿದವೋ ದಲಿತ ಬಂಡಾಯದ ಕಾಲಘಟ್ಟದಲ್ಲಿ ಅದಕ್ಕೆ ತದ್ವಿರುದ್ಧವಾದ ಕವನಗಳು ರಚನೆಯಾದವು

ಸಿದ್ಧಲಿಂಗಯ್ಯಾ ! ದೇವ್ರ ದಿಂಡ್ರುಗ್ ಕಡ್ಡಿ ಹಚ್ಚಿ ಸಾಕಾಗೋಯ್ತಪ್ಪ

ಸಾಕಾಗೋಯ್ತಪ್ಪ
ನನ್ನ ಮಗ್ನವ್ ಹಂಗೆ ಕುಂತವೆ
ಉಸ್ರೆ ವಂಡಲ್ಲ
ಮುಡ್ನಾಕೂಡು: ನಾನು ದೇವಸ್ಥಾನಕ್ಕೆ ಹೋದಾಗ
ಚಿನ್ನಸ್ವಾಮಿಚಪ್ಪಲಿಯನ್ನು ಹೊರಗೆ ಬಿಡುವುದಿಲ್ಲ
ನಾನೆ ಹೊರಗಿರುತ್ತೇನೆ.

ನವೋದಯದ ಪ್ರಕೃತಿ ದರ್ಶನ. ಮತ್ತು ದಲಿತ ಬಂಡಾಯದ ಸಾಮಾಜಿಕ ವಾಸ್ತವದ ಸ್ಥಿತಿ ಈ ಎರಡು ಕಾಲದ ಸೃಜನಶೀಲತೆಯೂ ನಾವು ಒಪ್ಪುತ್ತೇವೆ. ಒಂದು ಕಡೆ ಭಾವನೆಗೆ ಬುದ್ಧಿಗೆ ಸಂಬಂಧಿಸಿದ ಕ್ರಿಯೆಯಾದರೆ, ಮತ್ತೊಂದರಲ್ಲಿ ಬುದ್ಧಿ ಮತ್ತು ತರ್ಕದ ಜೊತೆ ಕಾವ್ಯ ಅನುಸಂಧಾನ ಮಾಡಿಕೊಂಡು ಸೃಜನೆಯಾಗುತ್ತದೆ. ಒಂದಕ್ಕೊಂದು ತದ್ವಿರುದ್ಧ ವಾದಗಳಾಗಿದ್ದರು, ಕವಿ ಕಂಡದ್ದು ಸತ್ಯದ ಜಾನ್ವತ್ಯವಾಗಿದೆ ಅನುಭಾವಿಯ ಭಾವ ಸರಳೀಕರಿಸಲು ಸಾಧ್ಯವಿಲ್ಲ. ತನ್ನ ಅನುಭವ ವೈಯಕ್ತಿಕವೆಂದೆ ಹೇಳುತ್ತಾನೆ. ಕವಿಗಳಿಗೆ ಸಾಮಾನ್ಯರಿಗಿರುವ ಇತಿಮಿತಿಗಳಿಲ್ಲ. ಅದಕ್ಕೆ ಯಾರ ಹಂಗೂ ಇಲ್ಲ ಕಾವ್ಯದಿಂದ ಅಸಾಧ್ಯವಾದುದನ್ನು ಸಾಧಿಸಬಹುದು.

ಸೃಜನಶೀಲತೆಯೆನ್ನುವುದು ಒಬೊಬ್ಬರು ಒಂದೊಂದು ಬಗೆಯಾಗಿ ಕಂಡಿದ್ದಾರೆ. ಕೆಲವರು ಸೃಜನಶೀಲತೆಯ ಫಲವನ್ನು ದೃಷ್ಟಿಯಲ್ಲಿಟ್ಟುಕೊಂಡು ವಾಖ್ಯೆ ನೀಡಿದರೆ, ಕೆಲವರು ಪ್ರಕ್ರಿಯೆಯನ್ನು ಆಧಾರವಾಗಿಟ್ಟುಕೊಂಡು ನಿರ್ವಹಿಸಲು ಹೆಚ್ಚಾಗಿದ್ದಾರೆ. ಕೆಲವರು ಸೃಜನಶೀಲ ವ್ಯಕ್ತಿತ್ವವನ್ನು ಅಧ್ಯಯನ ಮಾಡಿ ಅದು ಹೀಗೆ ಎಂದಿದ್ದಾರೆ.

ರಾಲೋಮೆ:ತಜ್ಞರ ಪ್ರಕಾರ: ಸೃಜನಶೀಲತೆಯು ಅತ್ಯಂತ ಪ್ರಜ್ಞಾಪೂರ್ಣನಾದ ವ್ಯಕ್ತಿಯೋರ್ವನು ತನ್ನ ಸುತ್ತಲಿನ ಪ್ರಪಂಚದೊಡನೆ ನಡೆಸುವ ಮುಖಾಮುಖಿ ಎಂದಿದ್ದಾನೆ.

ಕೋಲ್‌ರಿಜನ್ ಪ್ರಕಾರ:

ನಮ್ಮ ಎಲ್ಲಾ ಅರಿವಿನ ಮೂಲ ಸತ್ವವೆ ಪ್ರತಿಭೆ. ವಾಸ್ತವ ಎಂದು ಭಾವಿಸುವ ಈ ಲೋಕ ಕೂಡ ನಮ್ಮ ಪ್ರತಿಭೆಯ ವಾಸ್ತವ ಎಂದು ಭಾವಿಸುವ ಈ ಲೋಕ ಕೂಡ ನಮ್ಮ ಪ್ರತಿಭೆಯ ಕಣ್ಣಿಗೆ ಕಂಡದ್ದೆ ಯಾಕೆಂದರೆ ನಾವು ಜಗತ್ತನ್ನು ನೋಡುವುದು ಎಂದರೆ ಅದು ನಮ್ಮ ಮನೋಧರ್ಮಕ್ಕೆ ತಕ್ಕಂತೆ ನೋಡುತ್ತವೆ. ಯಾವ ಸಾಮರ್ಥ್ಯದ ಮೂಲಕ ಮನುಷ್ಯ ತನ್ನ ಇಂದ್ರಿಯಗಳ ಜಗತ್ತನ್ನು ಪುನಃ ಸೃಷ್ಟಿಸಿಕೊಳ್ಳುತ್ತಾನೋ ಅದನ್ನು ಮೂಲ ಪ್ರತಿಭೆ ಎಂದು ಕರೆಯುತ್ತಾನೆ.

ನಾವು ಕಾಣುವ ವ್ಯವಹಾರಿಕವಾದ ಈ ಜಗತ್ತು ನಮ್ಮ ಮೂಲ ಪ್ರತಿಭೆಯ ಜಗತ್ತು. ಈ ಪ್ರಥಮ ದೃಷ್ಟಿಗೆ ಕಂಡ ಜಗತ್ತನ್ನು ಕವಿಯ ಸೃಜನಾತ್ಮಕ ಪ್ರತಿಭೆ ಮುರಿದು ಕರಗಿಸಿ ಅದರಿಂದ ಬೇರೊಂದು ನಿರ್ಮಿತಿಯಲ್ಲಿ ತೊಡಗುವ ಕಾರಣಾ ಕವಿ ಪ್ರತಿಭೆಯನ್ನು ಕೋಲ್‌ರಿಜ ದ್ವಿತೀಯ ಪ್ರತಿಭೆ ಎಂದು ಕರೆಯುತ್ತಾನೆ. ದೈನಂದಿನ ಚಿರಪರಿಚಿತ ಜಗತ್ತಿನ ಅನುಭವಗಳನ್ನು ಮುರಿದು ಕರಗಿಸಿ ಅದೆ ಸಾಮಗ್ರಿಯಿಂದ ಕವಿ ಪ್ರತಿಭೆ ಬೇರೊಂದು ಕಾವ್ಯ ಜಗತ್ತನ್ನು ನಿರ್ಮಾಣಾ ಮಾಡುತ್ತದೆ ಎನ್ನುತ್ತಾರೆ.

ಫ್ಯಾಂಕ ಬ್ಯಾರನ್ ಹೊಸದನ್ನು ಆವಿಷ್ಕರಿಸುವ ಸಾಮರ್ಥ್ಯ ರಚನಾತ್ಮಕ ರೀತಿಯಲ್ಲಿ ತನ್ನನ್ನು ತೊಡಗಿಸುವ ಶಕ್ತಿಯೇ ಸೃಜನಶೀಲತೆ. ಸೃಜನಶೀಲತೆ ಹಾಗಿದೆ. ಹೀಗಿದೆ ಎಂದು ಬಣ್ಣಿಸಲು ಸಾಧ್ಯವಿಲ್ಲ. ಅದು ಸೆಳೆ ಮಿಂಚಿನಂತೆ, ಮಿಂಚನ್ನು ಹಿಡಿಯಲು ಸಾಧ್ಯವಿಲ್ಲ. ಅದನ್ನು ನೋಡಿ ಆನಂದಿಸಬಹುದಷ್ಟೇ ಎನ್ನುತ್ತಾನೆ.

ಕವಿಗಳು, ಕಾದಂಬರಿಕಾರರು, ಕಲಾವಿದರು, ಮಾತ್ರ ಸೃಜನಶೀಲರೆ? ಸಾಮಾನ್ಯರಾದ ನಾವು ನೀವೆಲ್ಲ ಸೃಜನಶೀಲರಲ್ಲವೆ? ಎಂಬ ಪ್ರಶ್ನೆ ಸಹಜ. ಈ ಜಗತ್ತಿನಲ್ಲಿ ಸೃಜನಶೀಲರಲ್ಲದವರಿಲ್ಲ. ಸೃಜನಶೀಲತೆಯ ಗುಣಗಳು ಅಷ್ಟೋ ಇಷ್ಟೋ ಇವೆ. ಆದರೆ ಪ್ರತಿಭಾವಂತರಲ್ಲಿ ಕಲ್ಪನಾ ಶಕ್ತಿ, ಸಾಧಕ ಶಕ್ತಿ, ಧಣಿವರಿಯದ ಛಲ ಅಭಿವ್ಯಕ್ತಿ ಗುಣ ಧಾರಾಳವಾಗಿರುತ್ತವೆ. ಕೆಲವರು ಸಣ್ಣ ಪುಟ್ಟ ಅವಕಾಶಗಳನ್ನು ಬಳಸಿಕೊಳ್ಳುತ್ತಾರೆ. ಕೆಲವರು ಹಿಂಜರಿಕೆಯಿಂದಲೆ ನಿರಶನ ಹೊಂದುತ್ತಾರೆ. ಕೆಲವರಿಗೆ ಅವಕಾಶ ಸಿಗದೆ ಹೋಗಬಹುದು.

ಸೃಜನಶೀಲತೆಯು ಅಂತಃ ಪ್ರೇರಣೆಯ ಅತ್ಯುನ್ನತರೂಪ ಸೃಷ್ಟಿಶೀಲ ವ್ಯಕ್ತಿ ಅಪೂರ್ವ, ವಿಶಿಷ್ಟ, ಪ್ರತಿಭಾನ್ವಿತ ವ್ಯಕ್ತಿ. ಸೃಜನ ಶೀಲತೆಯೆನ್ನುವುದು ತರ್ಕಾತೀತ ಮತ್ತು ಕೆಲವೆ ಕೆಲವು ವಿಶಿಷ್ಟ ವ್ಯಕ್ತಿಗಳಿಗೆ ಲಭ್ಯವಾಗುವ ಶಕ್ತಿ. ಹಾಗಾಗಿ ಸೃಜನಶೀಲತೆಯನ್ನು ಸೂಕ್ತ ತರಬೇತಿಯ ಮೂಲಕ ಬೆಳೆಸಲಾಗುವುದಿಲ್ಲ.

ತತ್ವಜ್ಞಾನಿ ಕೌಂಟನ ಪ್ರಕಾರ: ಸೃಜನಶೀಲತೆಯು ಒಂದು ಸಹಜ ಪ್ರಕ್ರಿಯೆ. ಅದಕ್ಕೆ ಅದರದೆಯಾದ ನಿಂಬಂಧನೆಗಳಿವೆ. ಅಂತ: ಪ್ರೇರಣೆಯುಳ್ಳ ಅಸಾಧಾರಣಾ ಪ್ರತಿಭಾವಂತನು ಸೃಷ್ಟಿಕ್ರಿಯೆಯೆಂದು ಸಂಬಂಧದಲ್ಲಿ ತನ್ನದೆ ಕ್ರಮ ನಿಯಮ ಕಂಡುಕೊಳ್ಳುತ್ತಾನೆ. ಸೃಜನ ಶೀಲತೆಯಲ್ಲಿ ಅಂತಃ ಪ್ರೇರಣೆ, ನಿಗೂಢತೆ, ತರ್ಕಾತೀತತೆಗೆ ಬೆಲೆ ಕೊಡಬಹುದಾದರು ಸೃಜನಶೀಲ ಚಿಂತನವನ್ನು ಬೆಳೆಸುವ ಸಂಬಂಧದಲ್ಲಿ ಹಲವಾರು ಕಡೆ ಪ್ರಯೋಗ ಮಾಡಲಾಗಿದೆ. ಪರಿಣಾಮಕಾರಿಯಾದಂತಹ ಪ್ರಯೋಜನವಾದದ್ದು ಕಡಿಮೆ. ಭಾವನೆಗಳನ್ನು ಹೀಗೆ ಹುಟ್ಟಿಸಬೇಕೆಂದು ಹೇಳುವುದು ಕಷ್ಟ.

ಸೃಜನಶೀಲತೆಯು ಅನುಭಾವದ ಆಳದಿಂದ ಬರಬೇಕು ಹಾಗೆಯೇ ಉತ್ಪನ್ನವಾಗುವ ವಿಚಾರಗಳ ಸಂಯೋಜನೆ ಮನಸ್ಸು ಹಳೆಯ ವಿಚಾರಗಳಿಂದ ಹೊಸ ವಿಚಾರಗಳನ್ನು ರೂಪಿಸುತ್ತದೆ. ಸಮಸ್ಯೆಯೊಂದು ಎದುರಾದಾಗ ವ್ಯಕ್ತಿಯೂ ಒಂದಲ್ಲ ಒಂದು ಬಗೆಯ ವಿಚಾರಗಳ ಸಂಯೋಜನೆಯನ್ನು ಪ್ರಯತ್ನಿಸಿ ಯಾವುದೋ ಒಂದು ಸೂಕ್ತ ಸಂಯೋಜನೆಯ ಮೂಲಕ ಪರಿಹಾರವನ್ನು ಕಂಡುಕೊಳ್ಳುತ್ತಾನೆ. ಸೃಜನಶೀಲ ಚಿಂತನವೆನ್ನುವುದು ಮಾನಸಿಕ ಸಂಯೋಜನೆಗಳ ಚಾಲಕಶಕ್ತಿ ಸರಿಯಾದ ಸಂಯೋಜನೆಯು ರೂಪುಗೊಳ್ಳುವರೆಗೆ ವ್ಯಕ್ತಿಯೂ ಸರಿಯಾದ ಸಂಯೋಜನೆಯು ರೂಪುಗೊಳ್ಳುವವರೆಗೆ ವ್ಯಕ್ತಿಯೂ ಸಮಸ್ಯೆಯನ್ನು ಕುರಿತಾಗಿ ಆಲೋಚಿಸುವುದನ್ನು ಕೈ ಬಿಡುವವರೆಗೂ ಈ ಕ್ರಿಯೆಯೂ ನಡೆಯುತ್ತಿರುತ್ತದೆ. ಆದುದರಿಂದ ವ್ಯಕ್ತಿಯೂ ಹೆಚ್ಚು ಹೆಚ್ಚು ವಿಚಾರ ಸಂಯೋಜನೆ ಮಾಡಲು ಕಲಿತಂತೆ ಆತ ಹೆಚ್ಚು ಹೆಚ್ಚು ಸೃಜನಶೀಲನಾಗುತ್ತಾನೆ. ಪ್ರಾಯ್ಡನ ಮನೋ ವಿಶ್ಲೇಷಣೆಯ ಪ್ರಕಾರ ಕಲಾವಿದರು ಕವಿಗಳಲ್ಲಿ ಕಂಡು ಬರುವ ಸೃಜನಶೀಲ ವರ್ತನೆಯು ಶೈಶವಾವಸ್ಥೆಯ ಆಟದ ಮುಂದುವರಿಕೆಯಾಗಿದೆ ಎನ್ನುತ್ತಾನೆ. ಸೃಜನಶೀಲ ಲೇಖಕರು ತಾವು ಬರವಣಿಗೆ ರೂಢಿಸಿಕೊಂಡಿದ್ದು ಬಾಲ್ಯದ ನೆನಪುಗಳೆ ಎಂದು ಹೇಳುತ್ತಾರೆ.

ಒಬ್ಬ ಸೃಜನಶೀಲನಾದ ಅನುಭಾವಿ ಕವಿಯನ್ನು ಗುರುತಿಸಬೇಕಾದರೆ ನಮಗೆ ಪ್ರಮಾಣವಾಗುವುದು ಭಾಷೆ, ಭಾಷೆ ಅಭಿವ್ಯಕ್ತಿಯ ಸಾಧನವಾಗಿ ಭಾವನೆಗಳನ್ನು ಹೊರ ಚಿಮ್ಮಿಸುತ್ತದೆ. ಹಾಗಾಗಿ ಅವನ ಕಾವ್ಯಗಳಲ್ಲಿ ಪ್ರತಿಮೆಗಳನ್ನು ಪ್ರತೀಕಗಳನ್ನು ಬಳಕೆ ಮಾಡಿಕೊಳ್ಳುತ್ತಾನೆ. ಅದಕ್ಕೆನೆ ಅನುಭಾವಿಗಳು ಹೆಚ್ಚು ಹೆಚ್ಚು ನಿಗೂಢವಾಗಿ ಕಾವ್ಯ ರಚಿಸುತ್ತಾರೆ. ಮೇಲ್ನೋಟದ ಪ್ರಾಪಂಚಿಕ ಅರ್ಥವನ್ನು ಕಾವ್ಯಕ್ಕೆ ಅನಾವರಣ ಮಾಡುತ್ತಾನೆ. ಅದರ ಗೂಡಾರ್ಥ ಬೇರೆಯೆ ಆಗಿರುತ್ತದೆ. ಒಂದೆ ಹಾಡಿನಲ್ಲಿ ಎರಡೆರದೂ ಅರ್ಥ ಕಲ್ಪಿಸಿಕೊಳ್ಳುವಷ್ಟು ಕವಿತ್ವ ರಚನೆ ಮಾಡುವ ಶಕ್ತಿ ಹೊಂದಿರುತ್ತಾರೆ.

**ಆಕರಗ್ರಂಥಗಳು**

1. ಸೃಜನಶೀಲತೆ–ಮಹಾಬಲೇಶ್ವರಾವ್
2. ಸೃಜನಶೀಲತೆ ಮತ್ತು ಸಾಹಿತ್ಯ–ಡಾಕೇಶವ ಶರ್ಮಾ
3. ಕನ್ನಡ ಅಧ್ಯಯನ–(ಸಾ) ಡಾ.ರಹಮತ್ ತರಿಕೇರಿ
4. ಕಾವ್ಯಾರ್ಥ ಚಿಂತನ–ಡಾ.ಜಿ.ಎಸ್.ಶಿವರುದ್ರಪ್ಪ